ಅದೇ ತಾಧ್ಯಾತ್ಮವಿರುತ್ತದೆ, ಒಬ್ಬ ದಾರ್ಶನಿಕನಿಗೆ ಇರುವಂತೆ!

ಕೇಶವಶಾಸ್ತ್ರಿಗಳು ಉದ್ದಾಮ ಸಂಸ್ಕೃತ ಪಂಡಿತರು. ನಾನೂ ಕೂಡ ಒಬ್ಬ ಸಂಸ್ಕೃತ ಪಂಡಿತನ ಮಗ. 'ನಗ್ನ' ಎಂಬ ಸಂಸ್ಕೃತ ಪದಕ್ಕೆ ಅರ್ಥವೇ 'ಯಾವುದಕ್ಕೂ ಅಂಟಿಕೊಳ್ಳದ', 'ಬಿಚ್ಚಿಟ್ಟ', 'ತೆರೆದುಕೊಂಡ' ಎಂದು. ಇದೇ ತಾನೇ ಆತ್ಮ ಸಾಕ್ಷಾತ್ಕಾರದ ಪರಮೋದ್ದೇಶ. ಒಬ್ಬ ಚಿತ್ರ ಕಲಾವಿದ ಅದನ್ನು ಸಾಧಿಸಿದರೆ ಅದರಲ್ಲಿ ಅಪರಾಧವೇನಿದೆ? ಹಾಗೆ ಅದು ಅಪರಾಧವೆಂದರೆ ಕಾಳಿದಾಸನಂತಹ ಮಹಾಕವಿಗಳು ವರ್ಣಿಸಿರುವುದೆಲ್ಲವೂ ದೂಷಾರ್ಹವೇ, ನಾನು ಭಾರತ ಪೂರ್ತಿ ತಿರುಗಾಡಿದ್ದೇನೆ. ಎಲ್ಲಾ ದೇವಾಲಯಗಳಲ್ಲೂ ಕೆತ್ತಲ್ಪಟ್ಟಿರುವ ದೇವ ದೇವಿಯರ ವಿಗ್ರಹಗಳೆಲ್ಲಾ ಇಂಥದ್ದೇ ನಗ್ನತೆಯ ಸಾಕಾರವೇ ತಾನೇ? ಪೂಜಿಸಲ್ಪಡುವ ಲಿಂಗವೂ ನಗ್ನತೆಯ ಸಾಕಾರವಲ್ಲವೆ? ಬೆತ್ತಲೆ ನಿಂತ ಬಾಹುಬಲಿಗೂ ಬಟ್ಟೆ ಹಾಕಿ ಬಿಡೋಣವೇ? ಅಥವಾ ಆ ಶಿಲ್ಪಿಗಳನ್ನೆಲ್ಲಾ ಈ ಕೋರ್ಟಿಗೆ ಎಳೆದು ತರಬೇಕಲ್ಲವೆ! ಅದನ್ನೇಕೆ ಈ ಕೇಶವಶಾಸ್ತ್ರಿಗಳು ಮಾಡಲಿಲ್ಲ? ಯಶೋದೆಯ ಸ್ತನ್ಯಪಾನ ಮಾಡುತ್ತಿರುವ ಕೃಷ್ಣನ ಚಿತ್ರವನ್ನು ನೋಡುವವರು ಯಾರೂ ಅದನ್ನು ಕಾಮುಕ ದೃಷ್ಟಿಯಿಂದ ನೋಡಲು ಸಾಧ್ಯವಿಲ್ಲ. ಕೇಶವಶಾಸ್ತ್ರಿಗಳ ವಿಚಾರ ನನಗೆ ತಿಳಿಯದು! (ಕೋರ್ಟ್‌ನಲ್ಲಿ ನಗೆಯ ಅಲೆ!) ನನಗೆ ಮದುವೆಯಾಗಿ ಮೂರು ಮಕ್ಕಳಿದ್ದಾರೆ. ನನ್ನ ಪತ್ನಿ ಮಕ್ಕಳಿಗೆ ಮೊಲೆಯೂಡುವಾಗ ನಾನು ನೋಡಿದ್ದೇನೆ. ಇದಕ್ಕಾಗಿ ನನಗ್ಯಾವ ರೂಪದರ್ಶಿಯ ಅಗತ್ಯವೂ ಇಲ್ಲ. ನಾನು ನೆನಪಿನಿಂದ ಬರೆಯಬಲ್ಲೆ.

ಕೋಪದಿಂದ ಮೇಲೆದ್ದ ಶಾಸ್ತ್ರಿಗಳು 'ಕ್ಷಣಾರ್ಧದಲ್ಲಿ ಉತ್ತಮ ರೇಖಾಚಿತ್ರಗಳನ್ನು ಬಿಡಿಸಿ ವರ್ಮರು ತಾವು ದೊಡ್ಡ ಚಿತ್ರಕಲಾವಿದರೆಂದು ತೋರಿಸಿದ್ದಾರೆ ಎಂದು ಮಾತ್ರಕ್ಕೆ ಅವರ ವಾದ ಸರಿಯಿಲ್ಲ. ಪುರಾಣಪುಣ್ಯ ಕಥೆಗಳಲ್ಲಿ ಅನೇಕ ಪ್ರಸಂಗಗಳಿರುವಾಗ, ಇಂತಹ ನಗ್ನ ದೃಶ್ಯಗಳೇ ರಚಿಸಬೇಕೆಂಬ ಕಡ್ಡಾಯವೇನಿಲ್ಲವಲ್ಲ. ನಮ್ಮ ಸಂಸ್ಕೃತಿಯನ್ನು ಬಿಂಬಿಸುವ ಇನ್ನು ಅನೇಕ ಪ್ರಸಂಗಗಳನ್ನು ರಚಿಸಬಹುದಿತ್ತು. ಇದು ಕಲಾವಿದರ ವಿಕೃತ ಮನಸ್ಸಿನ ಪ್ರತಿಬಿಂಬವಷ್ಟೆ' ಎನ್ನುತ್ತಾ ಕುಳಿತುಕೊಂಡರು.

'ಯು ಮೇ ಪ್ರೊಸೀಡ್ ವರ್ಮಾಜಿ' (ನೀವು ಮುಂದುವರೆಸಿ ವರ್ಮರೇ) ಎಂದರು. ನ್ಯಾಯಾಧೀಶರು ಮುಗುಳ್ನಗುತ್ತಾ. 'ಕೇಶವಶಾಸ್ತ್ರಿಗಳ ಈ ಆರೋಪಕ್ಕೆ ಉತ್ತರ ಇಲ್ಲಿದೆ, ನಾನು ಪುರಾಣ ಪ್ರಸಂಗಗಳಲ್ಲಿ ಎಲ್ಲಿ ಅನಿವಾರ್ಯವೋ, ಅಗತ್ಯವೋ ಅಲ್ಲಿ ಮಾತ್ರ ನಗ್ನತೆಯನ್ನು ಚಿತ್ರಿಸಿದ್ದೇನೆ. ನಗ್ನತೆ ರಚಿಸಬೇಕೆಂದು ಪ್ರಸಂಗಗಳನ್ನು ಹುಡುಕಿಕೊಂಡು ಹೋಗಿಲ್ಲ. ಉದಾಹರಣೆಗೆ ಮೇನಕೆ ವಿಶ್ವಾಮಿತ್ರರ ಕಥೆಯಲ್ಲಿ ವಿಶ್ವಾಮಿತ್ರ ಒಬ್ಬ ಯೋಗಿ. ಯಾವುದೋ ಘಳಿಗೆಯಲ್ಲಿ ಅಪ್ಸರ ಸ್ತ್ರೀ ಮೇನಕೆಯನ್ನು ಮೋಹಿಸಿದ. ಶಕುಂತಲೆಯ ಜನನವಾಯಿತು. ಆದರೆ ಅವನು ತಪಸ್ವಿಯಾಗಿ ಅವರಿಬ್ಬರನ್ನು


ಶಂತನು–ಮತ್ಸ್ಯಗಂಧಿ

ಸ್ವೀಕರಿಸಲಾರದ ಅನಿವಾರ್ಯತೆ. ಮಗು ತನ್ನದಲ್ಲ ಎಂದು ಅವನೇನೂ ಹೇಳಲಿಲ್ಲ. 'ನಾನು ನಿಮ್ಮನ್ನು ಸಾಕಲಾರೆ' ಎಂದು ತನ್ನ ಅಸಹಾಯಕತೆ ತೋರಿಸುತ್ತಾನೆ. ಮೇನಕೆಗೂ ಅದು ಗೊತ್ತು. ಆದರೆ ಅವಳಿಗೆ ವಿಶ್ವಾಮಿತ್ರನೊಂದಿಗೆ ಕಳೆದ ದಿನಗಳ ಸುಖದ ನೆನಪು. ಅವನನ್ನು ಬಿಟ್ಟು ಹೋಗಲಾರದ ದುಃಖ. ಈ ಎಲ್ಲಾ ಮುಖಭಾವಗಳಿಗೆ ಇಲ್ಲಿ ಮುಖ್ಯವೇ ಹೊರತು ಅವರ ಅರೆನಗ್ನ ಸ್ಥಿತಿಗಳಿಗಲ್ಲ. ಊರ್ವಶಿಪುರೂರವರ ಕಥೆಯೂ ಅಂತೆಯೇ. ಆ ಕಥೆಯಲ್ಲಿ ನಗ್ನತೆ ಅನಿವಾರ್ಯ. ಆದ್ದರಿಂದ ಅದನ್ನು ಹಾಗೆಯೇ ರಚಿಸಬೇಕು. ನಾನು ಹೀಗೆ ರಚಿಸಿದ್ದೇನಲ್ಲ ಎಂಬ ನಾಚಿಕೆಯಾಗಲೀ, ಪಶ್ಚಾತ್ತಾಪವಾಗಲೀ ನನಗಿಲ್ಲ. ವಿದ್ವಾಂಸರು ಪುಟಗಟ್ಟಲೆ ಬರೆದು ಹೇಳಿರುವುದನ್ನೆಲ್ಲಾ ನಾನು ಒಂದೇ ಚಿತ್ರದಲ್ಲಿ ತೋರಿಸಿದ್ದೇನೆ ಎಂಬ ಹೆಮ್ಮೆ ಇದೆಯಷ್ಟೆ.

ನನ್ನ ಮೇಲೆ ಹೊರಿಸಲಾಗಿರುವ ಮತ್ತೊಂದು ಆರೋಪ ನಾನು ಹಿಂದೂ ದೇವದೇವಿಯರನ್ನು ಮನೆ ಮನೆ ಬಾಗಿಲಿಗೆ ತಂದುಬಿಟ್ಟಿದ್ದೇನೆ ಎಂದು. ಹೌದು ಒಪ್ಪಿಕೊಳ್ಳುತ್ತೇನೆ, ಆದರೆ ಇದನ್ನು ಆರೋಪವೆಂದಲ್ಲ. ನನ್ನ ಸಾಧನೆ ಎಂದು! ದೇವರು ಯಾರೊಬ್ಬರ ಸ್ವತ್ತೂ ಅಲ್ಲ. ಅವನು ಎಲ್ಲರಿಗೂ ಬೇಕಾದವನು. ಎಲ್ಲರಿಗೂ ಸೇರಿದವನು. ಭಾರತದಲ್ಲಿ ಮತ, ಭಾಷೆ, ಧರ್ಮಗಳ ಚೌಕಟ್ಟಿನಿಂದಾಗಿ ಅನೇಕರಿಗೆ ದೇವಾಲಯಗಳಿಗೆ ಪ್ರವೇಶವಿಲ್ಲ. ಅವರಿಗೂ ದೇವ ದೇವಿಯರ ಮೂರ್ತಿಯನ್ನು ನೋಡುವ ಅವಕಾಶ ಕಲ್ಪಿಸಬೇಡವೆ? ಆ ದಿಸೆಯಲ್ಲಿ ನನ್ನ ಈ 'ಕ್ಯಾಲೆಂಡರ್ ಆರ್ಟ್' ಒಂದು ಹೆಜ್ಜೆ. ನನ್ನಿಂದಾಗಿ ಒಬ್ಬ ಸಾಮಾನ್ಯ ಪ್ರಜೆಯೂ, ಅವನ ಯಾವ ಮತೀಯನೇ ಆಗಿರಲಿ, ತನ್ನ ಮನೆಯಲ್ಲೇ ದೇವದೇವಿಯರ ಚಿತ್ರಗಳನ್ನು ನೋಡಿ ಪೂಜಿಸುತ್ತಾನೆಂದರೆ ಅದೊಂದು ಸಾಧನೆ ಎಂದೇ ನಾನು ಸಂತಸ ಪಡುತ್ತೇನೆ. ಅದು ಭಾರತೀಯ ಸಂಸ್ಕೃತಿಯ ಪ್ರಚಾರಕ್ಕೆ ನನ್ನಿಂದಾದ ಕಾಣಿಕೆ. ಇದಕ್ಕಿಂತ ಹೆಚ್ಚಾಗಿ ನಾನೇನೂ ಹೇಳಬಯಸುವುದಿಲ್ಲ. ನಾನು ಶಾಸ್ತ್ರಿಗಳಿಗೆ ಧನ್ಯವಾದ ಹೇಳಬೇಕು.' ನ್ಯಾಯಾಧೀಶರು ಕೇಶವಶಾಸ್ತ್ರಿಗಳ ಕಡೆ ನೋಡಿದರು. ಅವರು